[Govt. of Karnataka C.R.P. 67]

| |
|---|
| **Deposition Sheets (RP.No.57) Form No.4** |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 1101/2024**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 5

ಸಾಕ್ಷಿದಾರನ ಹೆಸರು : ಶೇಖ್ ಶಫತ್

ತಂದೆಯ ಹೆಸರು : ಶುಕೂರ್ ಅಹಮ್ಮದ್

ಪ್ರಾಯ : 25 ವರ್ಷ

ಉದ್ಯೋಗ : ಲಾರಿ ಚಾಲಕ

ವಾಸ : ತೆಳ್ಳಾರು, ಕಾರ್ಕಳ

ದಿನಾಂಕ 30-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

ಈ ದಿನ ನ್ಯಾಯಾಲಯದಲ್ಲಿ 1 ಮತ್ತು 2 ನೇ ಆರೋಪಿತರು ಗೈರುಹಾಜರಿದ್ದು, ಆರೋಪಿತರನ್ನು ಗುರುತಿಸುವಲ್ಲಿ ಏನೂ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ದಿಃ 27-01-2024 ರಂದು ಪೋಲಿಸರು ಮರಳು ಕಳ್ಳತನವಾದ ಬಗ್ಗೆ ಮಹಜರಿಗೆ ಸಾಕ್ಷಿಯಾಗಿ ಬರುವಂತೆ ದೂರವಾಣಿ ಕರೆ ಮಾಡಿದ್ದು, ಅದರಂತೆ ನಾನು ಕುಕ್ಕುಂದೂರು ಗ್ರಾಮದ ಜಯಂತಿ ನಗರಕ್ಕೆ ಹೋಗಿರುತ್ತೇನೆ. ಅಲ್ಲಿ ಪೋಲಿಸರು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಬೆಳ್ಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ ತಕ್ಷೀರು ಸ್ಥಳ ಮತ್ತು ಸೊತ್ತು ಸ್ವಾಧೀನತಾ ಮಹಜರು ಮಾಡಿ, ಭಾವಚಿತ್ರ ತೆಗೆದು, ತಕ್ಷೀರಿಗೆ ಸಂಬಂಧಿಸಿದ ಮರಳು ತುಂಬಿದ ಟಿಪ್ಪರ್ ಲಾರಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಹಾಗೂ ಸದ್ರಿ ದಾಖಲೆಗೆ ನನ್ನ ಸಹಿ ಪಡೆದಿರುತ್ತಾರೆ. ನಂತರ 1 ನೇ ಆರೋಪಿ ಸ್ಥಳ

ತೋರಿಸಿಕೊಟ್ಟಂತೆ ತಕ್ಷೀರು ಸ್ಥಳದ ಮಹಜರು ತಯಾರಿಸಲು ಪಂಚರಾಗಿ ಸಹಕರಿಸುವಂತೆ ಕೇಳಿಕೊಂಡಿದ್ದು, ಅದರಂತೆ ಕಾರ್ಕಳ ತಾಲೂಕು ಮಿಯ್ಯಾರು ಗ್ರಾಮದ ಮಿಯ್ಯಾರು ಹೊಳೆಯ ಬಳಿ ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಆರೋಪಿ ತೋರಿಸಿಕೊಟ್ಟಂತೆ ಸ್ಥಳ ಮಹಜರು ತಯಾರಿಸಿ, ಭಾವಚಿತ್ರ ತೆಗೆದು, ಸ್ಥಳದಲ್ಲಿದ್ದ ಕಬ್ಬಿಣದ ಹಾರೆ ಮತ್ತು ಪ್ಲಾಸ್ಟಿಕ್ ಬುಟ್ಟಿಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಆದಾದ ಒಂದು ತಿಂಗಳ ನಂತರ ಠಾಣೆಗೆ ಬರುವಂತೆ ಪೋಲಿಸರು ಕರೆ ಮಾಡಿದ್ದು, ಅದರಂತೆ ಠಾಣೆಗೆ ಹೋಗಿರುತ್ತೇನೆ. ಠಾಣೆಯಲ್ಲಿ ಪೋಲಿಸರು ನನ್ನ ಹಾಗೂ ಚಾಸಾ-4 ರವರ ಸಮಕ್ಷಮ ಸೊತ್ತು ಬಿಡುಗಡೆ ಮಹಜರು ಮುಖೇನ ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡಿದ್ದ ಟಿಪ್ಪರ್ ಲಾರಿಯನ್ನು ಭಾವಚಿತ್ರ ತೆಗೆದು ವಾಹನದ ನೋಂದಣಿ ಮಾಲೀಕರಿಗೆ ಬಿಡುಗಡೆಗೊಳಿಸಿರುತ್ತಾರೆ.

ಸಾಕ್ಷಿಯು ತಕ್ಷೀರು ಸ್ಥಳ ಹಾಗೂ ಸೊತ್ತು ಸ್ವಾಧೀನತಾ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ಮಹಜರು ವೇಳೆ ತೆಗೆದ ನಿಪಿ-3 ರಿಂದ 6 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಆರೋಪಿ ತೋರಿಸಿಕೊಟ್ಟಂತೆ ತಯಾರಿಸಿದ ತಕ್ಷೀರು ಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ಮಹಜರನ್ನು ಈಗಾಗಲೇ ನಿಪಿ-7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-7 ಮಹಜರು ವೇಳೆ ತೆಗೆದ ನಿಪಿ-8 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಸೊತ್ತು ಬಿಡುಗಡೆ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ಮಹಜರನ್ನು ಈಗಾಗಲೇ ನಿಪಿ-9 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-9 ಮಹಜರು ವೇಳೆ ತೆಗೆದ ನಿಪಿ-10 ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ಸೊತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು : ಆರೋಪಿತರ ಪರ : ಶ್ರೀಮತಿ ಐ.ಎಸ್.ಕೆ ವಕೀಲರು ಸಮಯಾವಕಾಶ ಕೋರಿದ್ದು, ರೂ.1,000/- ಖರ್ಚಿನ ಮೇರೆಗೆ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ